# ಆಹಾ ಸುದ್ದಿ!

ಆನ್‌ಲೈನ್ ಶಾಪಿಂಗ್ ಮಾಡಿದವರಲ್ಲಿ ಕೆಲವರಿಗಾದರೂ ಬಾಕ್ಸ್‌ನಲ್ಲಿ ಕಲ್ಲು, ಮಣ್ಣು, ಕಾಗದದ ಚೂರುಗಳು ಸಿಕ್ಕಿರುವ ಅನುಭವವಾಗಿರಬಹುದು. ಅಮೆರಿಕಾದಲ್ಲಿ ಕೆಲವರು ಇನ್ನೂ ಅದೃಷ್ಟವಂತರು. ನಾಯಿಯ ಮಲ ತುಂಬಿದ ಬಾಕ್ಸ್‌ಗಳನ್ನು ಪಡೆದರಂತೆ. ಹಸುವಿನ ಸೆಗಣಿ ಸಿಕ್ಕಿದ್ದರೆ ಗಿಡಗಳಿದಾರೂ ಆಗುತ್ತಿತ್ತು ಎಂದು ಅವರೆಲ್ಲ ಟಿವಿಯಲ್ಲಿ ಕಾಣಿಸಿಕೊಂಡು ಗೊಣಗಿದರಂತೆ.



ಆಸ್ಟ್ರೇಲಿಯಾದ ಬ್ರಿಸ್ಬೇನ್ ಸ್ಟೇಡಿಯಂನಲ್ಲಿ ಆಸ್ಟ್ರೇಲಿಯ ಮತ್ತು ಪಾಕಿಸ್ತಾನದ ತಂಡಗಳ ನಡುವೆ ಹಗಲು– ರಾತ್ರಿ ಕ್ರಿಕೆಟ್ ಪಂದ್ಯ ನಡೆಯುತ್ತಿದ್ದಾಗ ಕೆಲವು ಪ್ರೇಕ್ಷಕರು ಸ್ಟೇಡಿಯಂ ಒಳಗೇ ಇರುವ ಈಜುಗೊಳದಿಂದ ಪಂದ್ಯ ವೀಕ್ಷಿಸಿದರಂತೆ. ಪಂದ್ಯ ನೀರಸವಾದರೆ ಗ್ಯಾಲರಿಯಲ್ಲಿರುವ ಪ್ರೇಕ್ಷಕರಿಗೆ ಈಜುಗೊಳ ರಸ ಸೇರಿಸುತ್ತದೆ.




ಚಿಲಿಯ ಹಣಕಾಸು ಸಚಿವರಿಗೆ ಅಲ್ಲಿಯ ರಫ್ತುದಾರರ ಒಕ್ಕೂಟ ಸೆಕ್ಸ್ ಟಾಯ್ ಅನ್ನು ಉಡುಗೊರೆಯಾಗಿ ನೀಡಿ 'ಉತ್ತೇಜನ ನೀಡಿ' ಎಂಬ ಸಂದೇಶ ಕೊಟ್ಟಿದೆಯಂತೆ. ಈಗ ಸಚಿವರು ಉತ್ತೇಜನ ನೀಡುವುದು ಯಾವುದಕ್ಕೆ ಎಂದು ತಲೆ ಕೆಡಿಸಿಕೊಂಡಿರಬಹುದು.

ಹೈದರಾಬಾದ್‌ನಲ್ಲಿ ನಿಶ್ಚಿತಾರ್ಥ ನಡೆಯುತ್ತಿದ್ದಾಗ ನುಗ್ಗಿದ ಯುವಕನೊಬ್ಬ ಎಲ್ಲರೆದುರೇ ಹುಡುಗಿಗೆ ಮುತ್ತಿಟ್ಟು ಹುಡುಗಿಯ ಪೋಷಕರ ಮನಸ್ಸನ್ನೂ ಕದ್ದನಂತೆ. ಆಕೆ ಆತನ ಪ್ರಿಯತಮೆಯಾಗಿದ್ದು, ಎರಡೂ ಕಡೆಯ ಪೋಷಕರು ಈ ಬಿಂದಾಸ್ ಘಟನೆಯಿಂದ ಮದುವೆಗೆ ಒಪ್ಪಿದ್ದಾರಂತೆ. ನಡೆದ ಘಟನೆ ಬಾಲಿವುಡ್ ಮಸಾಲೆಗೆ ಪ್ರೇರಕವೋ ಅಥವಾ ಬಾಲಿವುಡ್ಡೇ ಇವರಿಗೆ ಪ್ರೇರಕವೋ!



ಇದು ಟೆಕ್ಸಾಸ್‌ನ ಮೃಗಾಲಯದಲ್ಲಿರುವ ಹೋಲ್‌ಸ್ಟೀನ್ ಜಾತಿಯ ದೈತ್ಯ ಹಸು. 6 ಅಡಿ 4 ಇಂಚು ಎತ್ತರವಿದ್ದು, 1046 ಕೆಜಿ ತೂಕವಿದೆಯಂತೆ. ಒಮ್ಮೆ ಶೌಚಕ್ಕೆ ಹೋದರೆ 150 ಪೌಂಡ್‌ನಷ್ಟು ಸೆಗಣಿ ಹಾಕುತ್ತದಂತೆ ಈ ಹಸು. ಇದು ಮೃಗಾಲಯದ ಸಿಬ್ಬಂದಿಗೆ ತಲೆನೋವು ತಂದಿದೆಯಂತೆ. ಬಯಲು ಶೌಚ ಅಲ್ಲಿಯೂ ಸಮಸ್ಯೆ ಸೃಷ್ಟಿಸಿದೆ ಅಂತಾಯ್ತು.



ಬೈರೂಟ್‌ನ ಝೌಕ್ ಎಂಬಾತ ಸಾವಿರಾರು ಕಾರುಗಳ ಸಂಗ್ರಹ ಮಾಡಿ ವಸ್ತು ಸಂಗ್ರಹಾಲಯವನ್ನೇ ಶುರು ಮಾಡಿದ್ದು, ಇದು ಗಿನ್ನೆಸ್ ದಾಖಲೆಗೆ ಸೇರಿದೆ. ಅವೆಲ್ಲ ಕಾರುಗಳ ಸಣ್ಣ ಮಾಡೆಲ್‌ಗಳು. ಅಂದರೆ ಆಟಿಕೆ ಕಾರುಗಳು.